ಜಿಲ್ಲಾ ಪರಿಷತ್ತ್ ಮುಖ್ಯ ಕಾರ್ಯದರ್ಶಿಯವರು ಶಿಕ್ಷಣ ಆಯುಕ್ತರಿಗೂ ಮತ್ತು ಸರ್ಕಾರಕ್ಕೆ (ಶಿಕ್ಷಣ ಇಲಾಖೆಗೆ) ವರದಿಯನ್ನು ಕಳುಹಿಸಿ ಕೊಟ್ಟಿರುತ್ತಾರೆ.

ಇ) ಮುಖ್ಯ ಕಾರ್ಯದರ್ಶಿ, ಜಿಲ್ಲಾ ಪರಿಷತ್ ಬೀದರ್, ಅವರ ವರದಿಯು ಸರ್ಕಾರದ (ಶಿಕ್ಷಣ ಇಲಾಖೆಯ) ಪರಿಶೀಲನೆಯಲ್ಲಿದೆ.

ಹಾಸನ ಕ್ಷೇತ್ರ ಬರಗಾಲ ಪೀಡಿತ ಪ್ರದೇಶಕ್ಕೆ ಪರಿಹಾರ

3053-ಶ್ರೀ ಕೆ.ಪಿಚ್. ಹನುಮೇಗೌಡ(ಹಾಸನ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಕ್ಷೇತ್ರದ ಬರಗಾಲ ಪೀಡಿತ ಪ್ರದೇಶಕ್ಕೆ ಶಾಶ್ವತ ಪರಿಹಹಾರ ಒದಗಿಸಲು ಹೇಮಾವತಿ ನದಿಯಿಂದ ಹನುಮಹಳ್ಳಿಯ ಹತ್ತಿರ ಒಂದು ಏತ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಲು ಸರ್ಕಾರ ನಿರ್ಧರಿಸಿರುವುದು ನಿಜವೇ?*

ಆ) *ಈ ಯೋಜನೆಯ ಪ್ಲಾನ್ ಮತ್ತು ಅಂದಾಜು ತಯಾರಾಗಿದೆಯೇ?*

ಇ) *ಈ ಯೋಜನೆಯಿಂದ ಹಾಸನ ಕ್ಷೇತ್ರದಲ್ಲಿ ಎಷ್ಟು ಎಕರೆ ಪ್ರದೇಶಕ್ಕೆ ನೀರೊದಗುತ್ತದೆ.?*

ಶ್ರೀ ಮಲ್ಲಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ನಿಜ.

ಆ) ತಯಾರಾಗುತ್ತಿದೆ.

ಇ) 9.600 ಎಕರೆ.

ನೀರಾವರಿ ಯೋಜನೆಯ ಬಗ್ಗೆ

3055-ಶ್ರೀ ಕೆ.ಪಿಚ್. ಹನುಮೇಗೌಡ(ಹಾಸನ): ಮಾನ್ಯ ಬಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಹಾಸನ ಕ್ಷೇತ್ರದ ಹೇಮಾವತಿ ಅಣೆಕಟ್ಟೆಯಿಂದ ಮುಳುಗಡೆಯಾದ ಹಾಸನ ತಾಲ್ಲೂಕಿನ ಪುನರ್ ವಸತಿಯ ರೈತರ ಜಮೀನಿಗೆ ನೀರೊದಗಿಸಲು ಹೇಮಾವತಿ ಅಣೆಯಿಂದ 'ಅಜನೇಯಪುರದ' ಹತ್ತಿರ ಒಂದು ಏತ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡಲು ಪ್ಲಾನ್ ಮತ್ತು ಅಂದಾಜು ತಯಾರಿಸುವುದು ನಿಜವಲ್ಲವೆ?*

ಆ) *ಈ ಯೋಜನೆಯ ಅಂದಾಜು ಮೊಬಲಗೆಷ್ಟು?*

ಇ) *ಈ ಯೋಜನೆಯಿಂದ ಹಾಸನ ಕ್ಷೇತ್ರದ ಯಾವ ಯಾವ ಹಳ್ಳಿಗಳ ಎಷ್ಟೆಷ್ಟು ಎಕರೆಗಳಿಗೆ ನೀರೊದಗುತ್ತದೆ(ವಿವರ ಒದಗಿಸಿ)*

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ನಿಜ.

ಆ) ರೂ. 10.05 ಕೋಟಿ.